# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಐವನ್ ಡಿ ಸೋಜಾ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : | 502 |
| ಉತ್ತರಿಸುವ ದಿನಾಂಕ | : | 30.01.2026 |
| ಉತ್ತರಿಸುವ ಸಚಿವರು | : | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲೆಗಳಲ್ಲಿ ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ಬೀಡಿ ಕಾರ್ಮಿಕರಿದ್ದು, ಬೀಡಿ ಕಾರ್ಮಿಕ ಉದ್ದಿಮೆಯು ನಶಿಸಿ ಹೋಗುತ್ತಿರುವುದರಿಂದ ಬೀಡಿ ಕಾರ್ಮಿಕ ರಿಗೆ ಬದಲಿ ವ್ಯವಸ್ಥೆಯನ್ನು ಮಾಡಬೇಕೆಂಬ ಬೇಡಿಕೆ ಇದ್ದು ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು? | ನಶಿಸಿ ಹೋಗುತ್ತಿರುವ ಬೀಡಿ ಉದ್ದಿಮೆಯಲ್ಲಿ ತೊಡಗಿರುವ ಕಾರ್ಮಿಕರಿಗೆ ಸದರಿ ಕೆಲಸದ ಬದಲಿಗೆ ಬದಲಿ ಉದ್ಯೋಗ ದೊರಕಿಸಿಕೊಟ್ಟು ಪುನರ್ವಸತಿಗೊಳಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| ಆ) | ಬೀಡಿ ಕಾರ್ಮಿಕರು ಅನೇಕ ರೋಗಗಳಿಗೆ ಬಲಿಯಾಗುತ್ತಿರುವುರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ (Dispensary)ಸರಿಯಾಗಿ ಕಾರ್ಯನಿರ್ವಹಿಸದೇ ಅವರಿಗೆ ಚಿಕಿತ್ಸೆಗೆ ಅವಕಾಶ ಆಗುತ್ತಿಲ್ಲ ಎಂಬ ದೂರುಗಳಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು | ಬೀಡಿ ಕಾರ್ಮಿಕರ ಔಷಧಾಲಯ (Dispensary) ನಡೆಸುವುದು ಕೇಂದ್ರ ಸರ್ಕಾರದ ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ Centarl Labour Welfare Board ರವರ ವ್ಯಾಪ್ತಿಗೆ ಒಳಪಡುತ್ತದೆ. |
| ಇ) | ಇ.ಎಸ್.ಐ ಆಸ್ಪತ್ರೆಗಳಲ್ಲಿಯೂ ಸಹ ವೈದ್ಯರು ಗಳ ಕೊರತೆ ಇದ್ದು, ಅಲ್ಲಿ ಯಾವುದೇ ಚಿಕಿತ್ಸೆ ಪಡೆಯಲು ಸಾಧ್ಯವಾಗುತ್ತಿಲ್ಲ ಎಂಬ ಕೂಗೂ ಗಳಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು | ಇ.ಎಸ್.ಐ ಆಸ್ಪತ್ರೆಗಳಲ್ಲಿ ವೈದ್ಯರುಗಳ ಕೊರತೆಯಿದ್ದು,<br><br>1. ಸರ್ಕಾರದ ಆದೇಶ ಸಂಖ್ಯೆ: ಕಾಇ 166 ಎಲ್ ಎಸ್‌ಐ 2025, ದಿನಾಂಕ:03-01-2025 ರಲ್ಲಿ 32 ವಿಮಾ ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಲು ಅನುಮೋದಿಸಲಾಗಿದೆ.<br>• ಸರ್ಕಾರದ ಆದೇಶದಂತೆ ಇಲಾಖೆಯಿಂದ ದಿನಾಂಕ 07-01-2026 ರಲ್ಲಿ ಅರ್ಹ ಅಭ್ಯರ್ಥಿಗಳ ನೇರ ಸಂದರ್ಶನಕ್ಕೆ ಅಧಿಸೂಚನೆ ಹೊರಡಿಸಲಾಗಿರುತ್ತದೆ.<br>• ದಿನಾಂಕ:21-01-2026 ರಂದು ಅಭ್ಯರ್ಥಿಗಳನ್ನು ನೇರ ಸಂದರ್ಶನ ಮಾಡಲಾಗಿದ್ದು, ಶೀಘ್ರವಾಗಿ ನೇರ ಸಂದರ್ಶನದಲ್ಲಿ ಆಯ್ಕೆಯಾದ ವೈದ್ಯರುಗಳನ್ನು ಇಲಾಖೆಗೆ ನೇಮಿಸಿಕೊಳ್ಳಲಾಗುತ್ತದೆ.<br><br>2. ಇಲಾಖೆಯ ಪತ್ರ ಸಂಖ್ಯೆ: ಅಭಿವೃದ್ಧಿ/51/21-22, ದಿನಾಂಕ:05-12-2025 ರಲ್ಲಿ ಇಲಾಖೆಯಲ್ಲಿ ಖಾಲಿಯಿರುವ 308 ವೈದ್ಯಾಧಿಕಾರಿಗಳ ಹುದ್ದೆಗಳನ್ನೂ ಒಳಗೊಂಡಂತೆ ವಿವಿಧ ವೃಂದದ ಒಟ್ಟು 1038 ಹುದ್ದೆಗಳನ್ನು KPSC ಮುಖಾಂತಾರ ಭರ್ತಿ ಮಾಡಿಕೊಳ್ಳುವ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿದೆ.<br><br>3. KPSC ಮುಖಾಂತರ ಇಲಾಖೆಗೆ ವೈದ್ಯಧಿಕಾರಿಗಳನ್ನು ನೇಮಿಸುವ ಪ್ರಕ್ರಿಯೆಗೆ ಹೆಚ್ಚಿನ ಕಾಲಾವಧಿ ತಗೆದುಕೊಳ್ಳುವ |

| | | |
|---|---|---|
| | | ಕಾರಣದಿಂದ ಮಧ್ಯಂತರದ ಕ್ರಮವಾಗಿ ಇಲಾಖೆಯ ಪತ್ರ ಸಂಖ್ಯೆ: ಅಭಿವೃದ್ಧಿ/31/25-26, ದಿನಾಂಕ:08-01-2026 ರಲ್ಲಿ ಇಲಾಖೆಗೆ ತುರ್ತಾಗಿ ಅವಶ್ಯವಿರುವ 231 ವೈದಾಧಿಕಾರಿಗಳು , 06 ದಂತ ಶಸ್ತ್ರ ಚಿಕಿತ್ಸಕರು ಮತ್ತು 80 ತಜ್ಞ ವೈದ್ಯರನ್ನು KPSC/KEA ಮುಖಾಂತರ ನೇರ ನೇಮಕಾತಿಯವರೆಗೂ ಎಂಬ ಷರತ್ತಿಗೊಳಪಟ್ಟು ಗುತ್ತಿಗೆ ಆಧಾರದ ಮೇರೆಗೆ ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿದೆ.<br><br>• ಮುಂದುವರೆದು, ಸರ್ಕಾರಿ ಕೋಟದಡಿ ಪಿ.ಜಿ. ಪ್ರವೇಶ ಪಡೆದು ಉತ್ತೀರ್ಣರಾದ ವೈದ್ಯಾಧಿಕಾರಿಗಳು ಒಂದು ವರ್ಷ ಸರ್ಕಾರಿ ಸೇವೆಯನ್ನು ಕೈಗೊಳ್ಳ ಬೇಕಾಗಿದ್ದು ಇಂತಹ ವೈದ್ಯಾಧಿಕಾರಿಗಳಲ್ಲಿ ಇಲಾಖೆಗೆ ಅಗತ್ಯವಿರುವ 95 ವಿವಿಧ ತಜ್ಞ ವೈದ್ಯರುಗಳನ್ನು ಕಾರಾವಿ ಆಸ್ಪತ್ರೆಗಳಿಗೆ ನೇಮಿಸುವಂತೆ ಇಲಾಖೆಯ ಪತ್ರ ಸಂಖ್ಯೆ: ವೈದ್ಯರು/104/ 2025-26, ದಿನಾಂಕ: 08-01-2026 ರಲ್ಲಿ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ, ಆರೋಗ್ಯ ಸೌಧ ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. |
| ಈ) | ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳಲ್ಲಿ ಬೀಡಿ ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸಲು ಸರ್ಕಾರ ಯಾವ ರೀತಿಯ ಕ್ರಮಕೈಗೊಂಡಿದೆ, ಅವರ ಆರೋಗ್ಯದ ಪರಿಸ್ಥಿತಿ ಮತ್ತು ಅವರ ಬೇಡಿಕೆಗಳಿಗೆ ಸರ್ಕಾರ ಯಾವ ರೀತಿ ಸ್ಪಂದನೆ ಮಾಡುತ್ತಿದೆ ವಿವರ ನೀಡುವುದು. | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬೀಡಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಬೀಡಿ ಕಾರ್ಮಿಕರು ಹಾಗೂ ಬೀಡಿ ಕಾರ್ಮಿಕರ ಸಂಘಟನೆಗಳಿಂದ ದೂರುಗಳು ಸ್ವೀಕೃತವಾದಲ್ಲಿ ವಿವಿಧ ಕಾರ್ಮಿಕ ಕಾಯ್ದೆಗಳಡಿ ತಪಾಸಣೆ ನಡೆಸಿ, ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಕಾರ್ಮಿಕರ ಮತ್ತು ಮಾಲೀಕರ ನಡುವೆ ಜಂಟಿ ಸಭೆ / ಸಂಧಾನ ಸಭೆಗಳನ್ನು ನಡೆಸಿ ಸೌಹಾರ್ದಯುತ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಮುಂದುವರೆದು ಬೀಡಿ ಕಾರ್ಮಿಕರ ಸಮಸ್ಯೆ ಗಳಿಗೆ ಸ್ಪಂದಿಸಲು ಮಾನ್ಯ ಕಾರ್ಮಿಕ ಸಚಿವರ ಅಧ್ಯಕ್ಷತೆಯಲ್ಲಿ ಮಾಲೀಕರು ಮತ್ತು ಕಾರ್ಮಿಕ ಸಂಘಟನೆಗಳ ಸಭೆಗಳನ್ನು ನಡೆಸಿ ಚರ್ಚಿಸಲಾಗುತ್ತಿದೆ. |

**ಸಂಖ್ಯೆ: LD 49 LWA 2026**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**